**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಭದ್ರಾವತಿ**

**ಸಿ ಸಿ ಸಂಖ್ಯೆ:1205/2025**

**ದೋಷಾರೋಪಣೆ**

ಶ್ರೀ ಹನುಮಂತ ಜಿ.ಹೆಚ್., ಬಿ.ಎ.ಎಲ್., ಎಲ್‌ಎಲ್.ಎಮ್., 1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಭದ್ರಾವತಿ ಆದ ನಾನು

1. ಸುನೀಲ್ ಕುಮಾರ್
   ಬಿನ್ ರಂಗಪ್ಪ,
   ವಯಸ್ಸು 30 ವರ್ಷ,
   ವಾಸಃ ಎಕೆ ಕಾಲೋನಿ,
   ಬಿಳಕಿ ಗ್ರಾಮ, ಭದ್ರಾವತಿ ತಾಲ್ಲೂಕು.

2. ರಂಗಪ್ಪ ಬಿನ್ ಪಿಲ್ಲಪ್ಪ,
   ವಯಸ್ಸು 58 ವರ್ಷ,
   ವಾಸಃ ಎಕೆ ಕಾಲೋನಿ,
   ಬಿಳಕಿ ಗ್ರಾಮ, ಭದ್ರಾವತಿ ತಾಲ್ಲೂಕು.

3. ಚಂದ್ರಮ್ಮ ಕೋಂ ರಂಗಪ್ಪ,
   ವಯಸ್ಸು 51 ವರ್ಷ,
   ವಾಸಃ ಎಕೆ ಕಾಲೋನಿ,
   ಬಿಳಕಿ ಗ್ರಾಮ, ಭದ್ರಾವತಿ ತಾಲ್ಲೂಕು.

4. ಆಶಾ
   ಕೋಂ ಅನಿಲ್ ಕುಮಾರ್,
   ವಯಸ್ಸು 31 ವರ್ಷ,
   ವಾಸಃ ಎಕೆ ಕಾಲೋನಿ,
   ಬಿಳಕಿ ಗ್ರಾಮ, ಭದ್ರಾವತಿ ತಾಲ್ಲೂಕು.

5. ರಮೇಶ
ಬಿನ್ ರಂಗಪ್ಪ,
ವಯಸ್ಸು 40 ವರ್ಷ,
ವಾಸಃ ಎಕೆ ಕಾಲೋನಿ,
ಬಿಳಕಿ ಗ್ರಾಮ, ಭದ್ರಾವತಿ ತಾಲ್ಲೂಕು.

ಎಂಬ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ದೋಷಾರೋಪ ಎನೆಂದರೆಃ-

ಮೊದಲನೆಯದಾಗಿ, ದಿನಾಂಕ 29.07.2025 ರಂದು ಸಂಜೆ 6.30 ಗಂಟೆ ಸಮಯದಲ್ಲಿ, ಭದ್ರಾವತಿ ಗ್ರಾಮಾಂತರ ಪೋಲಿಸ್ ಠಾಣಾ ವ್ಯಾಪ್ತಿಯ, ಭದ್ರಾವತಿ ತಾಲ್ಲೂಕು, ಬಿಳಕಿ ತಾಂಡ ಗ್ರಾಮದಲ್ಲಿ, ಚಾಸಾ-1 ರವರ ಮಗ ಭುವನ್ 3 ನೇ ಆರೋಪಿಯಾದ ನಿಮ್ಮ ಮನೆಗೆ ಹೋಗಿ ವಾಪಾಸ್ ಬರುತ್ತಿರುವಾಗ, ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ, ಅಕ್ರಮ ಕೂಟ ಮಾಡಿಕೊಂಡು ಅದರ ಸದಸ್ಯರಾಗುವ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ 189(2) ಸಹ ಕಲಂ 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಎರಡನೆಯದಾಗಿ, ಚಾಸಾ-1/ಚೈತ್ರ ರವರು ಮದುವೆಯಾದ ಸುಮಾರು 10 ವರ್ಷಗಳ ಕಾಲ 1 ರಿಂದ 4 ನೇ ಆರೋಪಿತರಾದ ನಿಮ್ಮಿಂದ ಚಾಸಾ-1 ಹಾಗೂ ಅವರ ಮಕ್ಕಳು ತುಂಬಾ ತೊಂದರೆಯನ್ನು ಅನುಭವಿಸುತ್ತಿದ್ದು, ಆರೋಪಿತರಾದ

ನೀವು ಅಕ್ರಮ ಕೂಟದ ಸದಸ್ಯರಾಗಿ, ನಿಮ್ಮ ಏಕೋದ್ದೇಶದ ಸಾಧನೆಗಾಗಿ, ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ನಿಮ್ಮ ಕೈಗಳಿಂದ ಅವರಿಗೆ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯ ಪಡಿಸಿ, ಚಾಸಾ-1 ರವರಿಗೆ ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡುವ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ.85 ಸಹ ಕಲಂ 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೂರನೆಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಕ್ರಮ ಕೂಟದ ಸದಸ್ಯರಾಗಿ, ನಿಮ್ಮ ಏಕೋದ್ದೇಶದ ಸಾಧನೆಗಾಗಿ, 4 ನೇ ಆರೋಪಿಯವರಾದ ನೀವು ಚಾಸಾ-1 ರವರಿಗೆ ಅವ್ಯಾಚ್ಯ ಶಬ್ದಗಳಿಂದ ಬೈಯ್ದು, ದಿನಾಂಕ 30.07.2025 ರಂದು ಸಂಜೆ 06.30 ಗಂಟೆ ಸಮಯದಲ್ಲಿ, ಮೇಲೆ ಹೇಳಿದ ಸ್ಥಳದಲ್ಲಿ ಆರೋಪಿತರಾದ ನೀವು ಅಕ್ರಮ ಕೂಟದ ಸದಸ್ಯರಾಗಿ, ನಿಮ್ಮ ಏಕೋದ್ದೇಶದ ಸಾಧನೆಗಾಗಿ, 1 ರಿಂದ 5 ನೇ ಆರೋಪಿತರಾದ ನೀವು ಚಾಸಾ-1, ಚಾಸಾ-4/ಶಿವಮ್ಮ, ಚಾಸಾ-5/ರುದ್ರಮ್ಮ, ಚಾಸಾ-6/ಸೌಮ್ಯ ಹಾಗೂ ಚಾಸಾ-7/ಲಲಿತಮ್ಮ ರವರಿಗೆ ಅವ್ಯಾಚ್ಯ ಶಬ್ದಗಳಿಂದ ಬೈಯ್ದು, ಸಾರ್ವಜನಿಕ ನೆಮ್ಮದಿಗೆ ಭಂಗ ಉಂಟು ಮಾಡುವ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ 352 ಸಹ ಕಲಂ 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಕೊನೆಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಅಕ್ರಮ ಕೂಟದ ಸದಸ್ಯರಾಗಿ, ನಿಮ್ಮ ಏಕೋದ್ದೇಶದ ಸಾಧನೆಗಾಗಿ, 2 ಮತ್ತು 4 ನೇ ಆರೋಪಿತರಾದ ನೀವು ನಿಮ್ಮ ಕೈಗಳಿಂದ ಚಾಸಾ-1 ರವರಿಗೆ ಹೊಡೆದು, 1 ರಿಂದ 5 ನೇ ಆರೋಪಿತರಾದ ನೀವು ಚಾಸಾ-1, ಚಾಸಾ-4, ರಿಂದ ಚಾಸಾ-7 ರವರಿಗೆ ಹೊಡೆದು, ಸಾದಾ ಸ್ವರೂಪದ ಗಾಯವುಂಟು ಮಾಡುವ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ 115(2) ಸಹ ಕಲಂ 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ನಾನು ಈ ಮೇಲಿನ ದೋಷಾರೋಪಣೆಗಳ ಮೇಲೆ ಈ ನ್ಯಾಯಾಲಯದ ವಿಚಾರಣೆಗೆ ನೀವು ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

**(ಹನುಮಂತ ಜಿ.ಹೆಚ್.)**

ದಿನಾಂಕಃ 14.08.2026

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಭದ್ರಾವತಿ.